ದಿನಾಂಕ 15-09-2022 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲು: ಪ್ರತಿವಾದಿಯ ಪರ ಶ್ರೀ ಎಂ.ಎಸ್.ಹೆಚ್ ವಕೀಲರಿಂದ:**

1. ನಾನು ಸಾಕ್ಷಿಯನ್ನು ವಾದಿಯ ಪರವಾಗಿ ನುಡಿಯಲು ಬಂದಿರುತ್ತೇನೆ. ಈ ದಾವೆಯನ್ನು ಯಾರು ಯಾರ ವಿರುದ್ಧ ಸಲ್ಲಿಸಿದ್ದಾರೆಂದು ಗೊತ್ತಿಲ್ಲ. ಪ್ರತಿವಾದಿಯ ಪರಿಚಯ ನನಗೆ ಇರುವುದಿಲ್ಲ. ದಾವಾ ಆಸ್ತಿಯ ಸ ನಂ: ಎ/3. ದಾವಾ ಆಸ್ತಿಯ ವಿಸ್ತಿರ್ಣ 1 ಎಕರೆ 33 ಗುಂಟೆ ಇದೆ. ದಾವಾ ಆಸ್ತಿಯನ್ನು ವಾದಿಯು ಬಹಿರಂಗ ಹರಾಜಿನಲ್ಲಿ ತೆಗೆದುಕೊಂಡಿರುತ್ತಾರೆ. ಸದರಿಯವರು ಬಹಿರಂಗ ಹರಾಜಿನಲ್ಲಿ ದಾವಾ ಆಸ್ತಿಯನ್ನು ಖರೀದಿಸುವ ವ್ಯವಹಾರ ಮತ್ತು ಪ್ರಕ್ರಿಯೆಯಲ್ಲಿ ನಾನು ಭಾಗವಹಿಸಿರಲಿಲ್ಲ. ಪ್ರತಿವಾದಿಗೆ ಸಂಬಂಧಿಸಿದ 2 ಎಕರೆ ಜಮೀನು ಇದೆ. ಸದರಿ 2 ಎಕರೆ ಜಮೀನನ್ನು ಪ್ರತಿವಾದಿಯೇ ವಹಿವಾಟು ಮಾಡುತ್ತಾರೆ ಎಂದರೆ ಸರಿ. ದಾವಾ ಆಸ್ತಿಯ ವಿಸ್ತೀರ್ಣವಾದ 1 ಎಕರೆ 33 ಗುಂಟೆಯನ್ನು ವಾದಿಯೇ ವಹಿವಾಟು ಮಾಡುತ್ತಿದ್ದಾರೆ ಎಂದರೆ ಸರಿ. ಪ್ರತಿವಾದಿಯು ದಾವಾ ಆಸ್ತಿಯನ್ನು ವಾದಿಯು ವಹಿವಾಟು ಮಾಡಲು ತೊಂದರೆ ನೀಡಿದ್ದಾರೋ ಅಥವಾ ಇಲ್ಲವೋ ನನಗೆ ಗೊತ್ತಿಲ್ಲ. ವಾದಿಯು ಪ್ರತಿವಾದಿಗೆ ತೊಂದರೆ ನೀಡುವ ದುರುದ್ದೇಶದಿಂದ ಸುಳ್ಳು ದಾವೆಯನ್ನು ಸಲ್ಲಿಸಿದ್ದಾರೆ ಎಂದರೆ ಸರಿಯಲ್ಲ. ನನಗೆ ದಾವಾ ಆಸ್ತಿಯ ಬಗ್ಗೆ ಮತ್ತು ದಾವೆಯ ಬಗ್ಗೆ ಯಾವುದೇ ಸಂಗತಿಗಳು ಗೊತ್ತಿಲ್ಲದೇ ಇದ್ದರೂ ಸಹ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ:ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ. ಹೇ. ಕೆ ಸರಿ ಇದೆ
ಎಂದು ಒಪ್ಪಿರುತ್ತಾರೆ.

Sd/-

ದಿವಾಣಿ ನ್ಯಾಯಾಧೀಶರು ಮತ್ತು ಜೆ ಎಂ ಎಫ್ ಸಿ
ಹಾನಗಲ್

ಸಾಕ್ಷಿದಾರರ ಸಹಿ